## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.542/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿತರುಃ1 ನಾಗಪ್ಪಾ ತಂದೆ ಮಲ್ಲಪ್ಪಾ ಮುದ್ದಣಿ,
ವಃ 65 ವರ್ಷ, ಉಃ ಒಕ್ಕಲುತನ,
2 ಮಲ್ಲಪ್ಪಾ ತಂದೆ ನಾಗಪ್ಪ ಮುದ್ದಣಿ,
ವಃ 28 ವರ್ಷ, ಉಃ ಒಕ್ಕಲುತನ,
ಇಬ್ಬರೂ ಸಾಃ ಹಾಬಾಳ(ಟಿ) ಗ್ರಾಮ, ತಾಃ ಸೇಡಂ.

----

## ದೋ ಷಾ ರೋ ಪ ಣೆ

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 09-08-2019 ರಂದು ಬೆಳಿಗ್ಗೆ 8.30 ಗಂಟೆ ಸುಮಾರಿಗೆ ಸೇಡಂ ಠಾಣಾ ಹದ್ದಿಯಲ್ಲಿರುವ ಹಾಬಾಳ(ಟಿ) ಗ್ರಾಮದ ಸೀಮಾಂತರದಲ್ಲಿ ಚಾಸಾ.1 ಮತ್ತು 4 ನೇದ್ದವರು ಹೊಲಕ್ಕೆ ಔಷಧ ಸಿಂಪಡಿಸಲಿಕ್ಕೆ ಟ್ರ್ಯಾಕ್ಟರನಲ್ಲಿ ಹೋಗುತ್ತಿದ್ದಾಗ, ಹಳೇ ವೈಷಮ್ಯದ ಹಿನ್ನಲೆಯಲ್ಲಿ ಆಗ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ.1 ಮತ್ತು 4 ನೇದ್ದವರಿಗೆ ವಿನಾಕಾರಣ ಜಗಳ ತೆಗೆದು, ಟ್ರ್ಯಾಕ್ಟರನ್ನು ಮುಂದೆ ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿ, ಬೋಸುಡಿ ಮಕ್ಕಳೆ ನಿಮಗೆ ಸೊಕ್ಕು ಬಂದಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.341, 504 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.9 ನೇದ್ದವನಿಗೆ ವಿನಾಕಾರಣ ಜಗಳ ತೆಗೆದು, 1 ನೇ ಆರೋಪಿ ಚಾಸಾ.1 ನೇದ್ದವನಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದಿದ್ದು, 2 ನೇ ಆರೋಪಿ ಚಾಸಾ.4 ನೇದ್ದವನಿಗ ಕೈಯಿಂದ ಬೆನ್ನಿಗೆ, ತಲೆಗೆ ಹೊಡೆದು ಗುಪ್ತಗಾಯಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.323, 324 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1 ನೇದ್ದವನ ಜೊತೆ ವಿನಾಕಾರಣ ಜಗಳ ತೆಗೆದು ಹೊಡಿಬಡಿ ಮಾಡುತ್ತಿದ್ದಾಗ, ಜಗಳ ಬಿಡಿಸಲು ಬಂದ ಚಾಸಾ.3 ಮತ್ತು 4 ನೇದ್ದವರಿಗೆ ಬೋಸುಡಿ ಮಕ್ಕಳೇ ನೀವು ಇದರಲ್ಲಿ ಮಧ್ಯ ಬಂದರೆ ನಿಮಗೆ ಬಿಡುವುದಿಲ್ಲ ಖಲ್ಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.506 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 02-08-2023 ಪ್ರ.ದ.ನ್ಯಾದಂ. ಸೇಡಂ.